# ಕುಟುಂಬದ ವಿಸ್ತರಿತ ಭಾಗವಾಗಿ ಶಾಲೆ

ಅನಿಲ್ ಸಿಂಗ್

ಮಾರ್ಚ್ 2020ರಿಂದ ಶುರುವಾಗಿ ಸುಮಾರು ಎರಡು ವರ್ಷ ಶಾಲೆಗಳು ಮುಚ್ಚಲ್ಪಟ್ಟಿದ್ದು ನಮ್ಮ ಸಮಾಜದ ಅಂಚಿನಲ್ಲಿರುವ ವರ್ಗಗಳ ಮೇಲೆ, ಜೊತೆಗೆ ಆರೋಗ್ಯ, ಉದ್ಯೋಗ ಮತ್ತು ಸಾಮಾಜಿಕ ಭದ್ರತೆಯಂತಹ ವಿಷಯಗಳ ಮೇಲೂ ಗಮನಾರ್ಹ ಪರಿಣಾಮ ಬೀರಿತ್ತು. ಅದರಲ್ಲೂ, ಮುಖ್ಯವಾಗಿ ಮಕ್ಕಳು ಉದ್ವೇಗ, ಅನಿಶ್ಚಿತತೆ ಮತ್ತು ಅಭಾವಗಳನ್ನು ಮೌನವಾಗಿ ಗಮನಿಸುತ್ತಿದ್ದುದರಿಂದ, ಅವರ ಪರಿಸ್ಥಿತಿ ಮತ್ತಷ್ಟು ಭೀಕರವಾಗಿತ್ತು. ದೊಡ್ಡವರು ಪರಿಸ್ಥಿತಿಯೊಂದಿಗೆ ಏಗುವ ದಾರಿ ಕಂಡುಕೊಂಡರೆ, ಮಕ್ಕಳಿಗೆ ಬಹಳ ಸೀಮಿತ ಆಯ್ಕೆಗಳಿದ್ದವು. ಶಾಲೆಯಲ್ಲಾದರೆ, ಇತರ ಮಕ್ಕಳೊಂದಿಗೆ ಪರಸ್ಪರ ಸಂವಹನ ನಡೆಸುತ್ತಾ, ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾ, ಹೊಸ ಸ್ನೇಹಿತರನ್ನು ಕಂಡುಕೊಳ್ಳುತ್ತಾ, ಸೃಜನಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಹೊಸ ಸಂಗತಿಗಳನ್ನು ಕಲಿಯುತ್ತಾ, ಏನೋ ಸಾಧಿಸಿದಂತೆ ಭಾವಿಸಿಕೊಳ್ಳುವ ಅವಕಾಶಗಳು ಮಕ್ಕಳಿಗೆ ಸಿಗುತ್ತಿದ್ದವು. ಹಾಗೆ ಮಾಡುವುದರಿಂದ, ಅವರಿಗೆ ತಮ್ಮ ಮನೆ ಮತ್ತು ಸುತ್ತಮುತ್ತಲಿನ ಒತ್ತಡದ ವಾತಾವರಣದಿಂದ ತಾತ್ಕಾಲಿಕವಾಗಿ ದೂರವುಳಿಯುವ ಮೂಲಕ ತಮ್ಮ ಯಾವುದೇ ಬಗೆಯ ಭಾವನಾತ್ಮಕ ಬಿಕ್ಕಟ್ಟಿನಿಂದ ಸ್ವಲ್ಪ ಮಟ್ಟಿನ ಬಿಡುಗಡೆ ಸಿಗುತ್ತಿತ್ತು. ಸೈದ್ಧಾಂತಿಕವಾಗಿ, ಇದು ಒಳ್ಳೆಯ ಉಪಾಯದಂತೆ ಕಂಡರೂ, ಪ್ರಾಯೋಗಿಕವಾಗಿ ಇಂತಹ ಪರಿಸ್ಥಿತಿಯ ಬಗ್ಗೆ ಶಾಲಾ ಹಂತದಲ್ಲಿಯೇ ಜಾಗೃತಿ ಮೂಡಿಸುವ ಮತ್ತು ಸೂಕ್ಷ್ಮ ಸಂವೇದನೆ ಬೆಳೆಸುವಂತಹ ಅವಶ್ಯಕತೆ ಬಹಳ ಇದೆ.

ಸಮಾಜೋ–ಆರ್ಥಿಕ ಸ್ಥಿತಿ ಕೆಳಹಂತದಲ್ಲಿರುವ ಸಮುದಾಯಗಳ ಮಕ್ಕಳು ಅಭಿವ್ಯಕ್ತಪಡಿಸುವುದಕ್ಕೂ ಹೆಣಗುತ್ತಿರುತ್ತಾರೆ, ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರ ಪ್ರಯತ್ನಗಳು ಮತ್ತು ಜವಾಬ್ದಾರಿಗಳು ಬಹಳ ಹೆಚ್ಚು ಇರುತ್ತವೆ ಎಂಬುದನ್ನು ನಾವು ನೆನಪಿಡಬೇಕು. ಶಾಲೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ, ಪ್ರೀತಿ, ಭದ್ರತೆ ಹಾಗೂ ಭಾವನಾತ್ಮಕ ಆಸರೆಯನ್ನು ನೀಡುವಂತಾದರೆ ಎಷ್ಟು ಚಂದ! ಶಿಕ್ಷಕರು, ವಯಸ್ಕರಾಗಿ, ಮಕ್ಕಳೊಂದಿಗೆ ಸಾಂಗತ್ಯ ಮತ್ತು ನಂಬಿಕೆ ಬೆಳೆಸಿ, ಮಕ್ಕಳು ಯಾವುದೇ ಸವಾಲಿನ ಪರಿಸ್ಥಿತಿಗಳಲ್ಲಿ ತಮ್ಮನ್ನು ತಾವು ನಿಭಾಯಿಸಿಕೊಳ್ಳುವಂತೆ ಅವರನ್ನು ಸಜ್ಜುಗೊಳಿಸಬಹುದು.ನಮ್ಮ ಶಾಲೆಯ ಬಹುತೇಕ ಮಕ್ಕಳು ಕೊಳೆಗೇರಿಗಳಲ್ಲಿ ವಾಸಿಸುವವರು. ಲಾಕ್ಡೌನ್ ಅವಧಿಯಲ್ಲಿ ಎಷ್ಟೋ ಮಂದಿ ಉದ್ಯೋಗ ಕಳೆದುಕೊಂಡರು. ಬಹುದೊಡ್ಡ ಪ್ರಮಾಣದಲ್ಲಿ ಉದ್ಯೋಗಸೃಷ್ಟಿ ಮಾಡುವ – ನಿರ್ಮಾಣ ಕ್ಷೇತ್ರ ಸ್ತಬ್ಧವಾಗಿತ್ತು. ಜನರು ತಮ್ಮ ಉಳಿತಾಯದ ಹಣವನ್ನು ತಮ್ಮ ದೈನಂದಿನ ಖರ್ಚುವೆಚ್ಚಗಳಿಗೆ ಬಳಸಿಕೊಳ್ಳಬೇಕಾಯಿತು. ಅಷ್ಟೇ ಅಲ್ಲದೆ, ಆದಾಯ ಕುಸಿಯುತ್ತಾ ಹೋದಂತೆ ಸಾಲ ಹೆಚ್ಚುತ್ತಾ ಹೋಯಿತು. ಇಡೀ ಕುಟುಂಬದ ಮೇಲೆ ಇದು ಪರಿಣಾಮ ಬೀರುವಂತಾಯಿತು. ಆ ಕಷ್ಟಕರ ಸನ್ನಿವೇಶದಲ್ಲಿ ಅಲ್ಲಿನ ಮಕ್ಕಳು ಪಡುತ್ತಿರುವ ಸಂಕಷ್ಟಗಳು ಹಾಗೂ ಶಾಲೆಯಲ್ಲಿದ್ದಿದ್ದರೆ ಸಾಧ್ಯವಾದ ಮಟ್ಟದಲ್ಲಿ ಅವರ ಬೆಂಬಲಕ್ಕೆ ನಾವು ನಿಂತ ಬಗೆಯನ್ನು ಇಲ್ಲಿ ಹೇಳಿದ್ದೇವೆ.

## ಸವಾಲಿನ ಪರಿಸ್ಥಿತಿಗಳಲ್ಲಿ ಮಕ್ಕಳು

ಮೇಹಕ್, ಒಂಬತ್ತು ವರ್ಷದ ಹುಡುಗಿ. ಪೌರಕಾರ್ಮಿಕರಾಗಿರುವ ಅವಳ ತಂದೆ ಬಹುತೇಕ ಒಂದು ವರ್ಷದವರೆಗೂ ನಿರುದ್ಯೋಗಿಯಾಗಿ ಉಳಿದಿದ್ದರು. ಕೆಲವು ತಿಂಗಳ ಮಟ್ಟಿಗೆ ಅವರು ತಮ್ಮ ಕುಟುಂಬದೊಂದಿಗೆ ಹಳ್ಳಿಗೆ ಹೋಗಿ ನೆಲೆಸಿದರು. ಆದರೆ ಹಳ್ಳಿಯಲ್ಲಿಯೂ ಗದ್ದೆ/ತೋಟದ ಕೆಲಸವಿಲ್ಲದೆ ದೀರ್ಘ ಕಾಲ ಇಡೀ ಕುಟುಂಬದ ನಿರ್ವಹಣೆ ಕಷ್ಟವಾಯಿತು.ನಗರದಲ್ಲಿ ಕನಿಷ್ಠ ಪಕ್ಷ ಯಾವುದಾದರೊಂದು ಕೆಲಸ ಸಿಗುತ್ತದೆ ಎಂದು ಅವರು ಹಳ್ಳಿಯಿಂದ ವಾಪಸ್ ಬಂದರು. ಈಗ ಅವರಿಗೆ ಪ್ರತಿದಿನವೂ ಪ್ರತಿಯೊಂದರ ಅಭಾವ ಎದುರಾಯಿತು. ಆಹಾರ ಸಾಮಗ್ರಿಗಳಿಗಾಗಿ ಸಾಲ ತೆಗೆದುಕೊಂಡಿದ್ದಾಯಿತು. ಅಪರೂಪಕ್ಕೊಮ್ಮೆ ಕೆಲಸ ಸಿಕ್ಕಿದರೂ, ಮನೆಯಲ್ಲಿ ಪ್ರತಿಕ್ಷಣವೂ ಅನಿಶ್ಚಿತತೆ ಮತ್ತು ಚಿಂತೆ ಆವರಿಸಿಕೊಂಡಿರುತ್ತಿತ್ತು.

ಶಾಲೆ ಪುನರಾರಂಭವಾದಾಗ, ಮೇಹಕ್ ಶಾಲೆಗೆ ಬಂದರೂ ತುಂಬಾ ಭಯಪಟ್ಟುಕೊಂಡಿದ್ದಳು. ಹಿಂದಿನಂತೆ ಎಲ್ಲರೊಂದಿಗೆ ಬೆರೆಯುವುದು, ಆಟವಾಡುವುದು, ತಮಾಷೆ ಮಾಡುವುದು ಕಾಣಲಿಲ್ಲ. ಆಕೆಯ ಜೊತೆಗೆ ಮಾತನಾಡುವ ಅಗತ್ಯವಿದೆ ಎಂದು ಅರಿತುಕೊಂಡೆವು. ಬೆಳಗಿನ 'ಸಂಗೀತ ಸಭಾ ದಲ್ಲಿ ಅವಳು ಕೆಲಕಾಲ ಹಾಡುವುದನ್ನು ಮುಂದುವರಿಸಿದರೂ, ಅವಳ ಮುಖ ಕಳೆಗುಂದಿತ್ತು. ನಾವು ಮೂವರು ಶಿಕ್ಷಕರು ನಮ್ಮಲ್ಲೇ ಮೂರು ಜವಾಬ್ದಾರಿಗಳನ್ನು ಹಂಚಿಕೊಂಡೆವು – ನಾನು ಆಟದ ಅವಧಿಯಲ್ಲಿ ಮೇಹಕ್ ಜೊತೆ ಮಾತನಾಡಿ, ಅವಳ ಯೋಚನೆಗಳು ಮತ್ತು ಭಾವನೆಗಳನ್ನು ತಿಳಿದುಕೊಳ್ಳುವುದು, ಮತ್ತೊಬ್ಬ ಶಿಕ್ಷಕ ಅಂಕಿತ್, ಅವಳೊಂದಿಗೆ ಕುಳಿತು ಆಹಾರ ಸೇವಿಸುವುದು ಮತ್ತು ಮೂರನೆಯ ಶಿಕ್ಷಕಿ ಸೋನಮ್, ತರಗತಿಯಲ್ಲಿ ಮೇಹಕ್ ಹೆಚ್ಚು ಹೆಚ್ಚು ತೊಡಗಿಸಿಕೊಂಡು, ಬೆರೆಯುವಂತೆ ಆಕೆಗೆ ನೆರವಾಗುವುದು – ಎಂದು ಜವಾಬ್ದಾರಿ ಹಂಚಿಕೊಂಡೆವು. ನಮ್ಮ ಶಾಲೆಯಲ್ಲಿ ಪ್ರತಿದಿನವೂ, ನಾವು ಪ್ರತಿಯೊಬ್ಬ ಮಗುವಿನ ಬಗ್ಗೆ ಚರ್ಚಿಸಲು ಮತ್ತು ಆ ದಿನ ಪ್ರತಿ ತರಗತಿಯ ಚಟುವಟಿಕೆಗಳ ಬಗ್ಗೆ ಚರ್ಚಿಸಲು ಒಂದು ಸಣ್ಣ ಸಭೆ

ಮಾಡುತ್ತಿದ್ದೆವು. ಅದನ್ನು ನಾವು ಪ್ರತಿದಿನವೂ ದಾಖಲಿಸಿ–ಕೊಳ್ಳುತ್ತಿದ್ದೆವು. ಮೇಹಕ್ ಜೊತೆ ಮಾತನಾಡುವಾಗ, ಅವಳ ಮನೆಯಲ್ಲಿ ಹಿಂದಿನ ರಾತ್ರಿ ಯಾರೂ ಏನೂ ತಿಂದಿರಲಿಲ್ಲ ಎಂದು ತಿಳಿಯಿತು. ಸಾಕಷ್ಟು ಹಣ ಇರಲಿಲ್ಲವಂತೆ. ಮೈದಾನದಲ್ಲಿ ನಡೆದಾಡುತ್ತಾ ನಾನು ಅವಳೊಂದಿಗೆ ಮಾತನಾಡುತ್ತಿದ್ದೆ. ನಾನು ಸಣ್ಣವಳಿರುವಾಗ ನಮ್ಮ ಮನೆಯಲ್ಲಿದ್ದ ಪರಿಸ್ಥಿತಿಯನ್ನು ಅವಳೊಂದಿಗೆ ಹಂಚಿಕೊಂಡೆ. ಅಲ್ಲದೆ, ಕೆಟ್ಟ ದಿನಗಳು ಕಳೆದುಹೋಗುತ್ತವೆ ಎಂದೂ ಆಕೆಗೆ ವಿವರಿಸಿದೆ. ಅವಳು ತನ್ನ ಅಜ್ಜ–ಅಜ್ಜಿ ನಡುವಿನ ಜಗಳದ ಬಗ್ಗೆ ಹೇಳಿದಳು. ನಾನು ಸಣ್ಣವಳಿರುವಾಗ ಹೊಸ ಬಟ್ಟೆ ಖರೀದಿಗೆ, ಶಾಲಾ ಶುಲ್ಕ ತುಂಬಲೂ ದುಡ್ಡು ಇರದೇ ಇದ್ದ ಪರಿಸ್ಥಿತಿಯನ್ನು ವಿವರಿಸಿದೆ. ನಾವು ಪ್ರತಿದಿನವೂ ಮಕ್ಕಳ ಜೊತೆ ಮಾತನಾಡಿದೆವು. ಅಂಕಿತ್ ಅವರು ಹಲವು ಬಾರಿ ಮಕ್ಕಳ ಜೊತೆಗೇ ಬೆಳಗ್ಗಿನ ಉಪಾಹಾರವನ್ನು ಸೇವಿಸುತ್ತಿದ್ದರು. ಮಕ್ಕಳನ್ನೆಲ್ಲ ಒಟ್ಟಾಗಿ ಸೇರಿಸಿ ಆಹಾರವನ್ನು ಗುಡ್ಡೆ ಹಾಕಿಕೊಂಡು ಪರಸ್ಪರ ಹಂಚಿಕೊಂಡು ಸೇವಿಸುತ್ತಿದ್ದೆವು. ಮೇಹಕ್, ಹಕ್ಕಿಗಳು ಮತ್ತು ಹೂವುಗಳ ಕುರಿತು ತರಗತಿಯಲ್ಲಿ ಪದ್ಯ ರಚಿಸಿರುವುದಾಗಿ ಸೋನಮ್ ಹೇಳಿದರು. ಆ ಪದ್ಯದ ಕುರಿತು ಒಂದು ಭಿತ್ತಿಚಿತ್ರ ಸಿದ್ಧಪಡಿಸಿ ತರಗತಿಯಲ್ಲಿ ಪ್ರದರ್ಶಿಸಿರುವುದಾಗಿಯೂ ಹೇಳಿದರು.

ಸುಮಾರು 15–20 ದಿನಗಳ ಈ ಯೋಜಿತ ಕಾರ್ಯದ ಬಳಿಕ, ಮೇಹಕ್ ಹಿಂದಿನಂತೆ ಉಲ್ಲಾಸದಿಂದ ಎಲ್ಲರೊಂದಿಗೆ ಬೆರೆಯುವುದನ್ನು ನಾವು ಕಂಡುಕೊಂಡೆವು. ಸಹಪಾಠಿ–ಗಳೊಂದಿಗೆ ಆಟೋಟದಲ್ಲಿ ಪಾಲ್ಗೊಂಡ ಆಕೆ, ತರಗತಿಯಲ್ಲಿಯೂ ಕ್ರಿಯಾಶೀಲವಾಗಿ ತೊಡಗಿಸಿಕೊಂಡಳು.

ಮೇಹಕ್ ಕೇವಲ ಆರು ಗಂಟೆ ಶಾಲೆಯಲ್ಲಿ ಕಳೆದರೆ, ಉಳಿದ 18 ಗಂಟೆ ಅವಳು ಮನೆಯಲ್ಲಿ, ತನ್ನ ಕುಟುಂಬದೊಂದಿಗೆ ಅದೇ ಕಠಿಣ ಪರಿಸ್ಥಿತಿಯಲ್ಲಿ ಕಳೆಯಬೇಕು ಎಂಬುದು ನಮಗೆ ತಿಳಿದಿತ್ತು. ಆದರೂ, ಆ ಆರು ಗಂಟೆಗಳ ಭಾವನಾತ್ಮಕ ಪ್ರಯೋಜನವನ್ನು ಆಕೆ ಪಡೆಯಲು ಮತ್ತು ಮಕ್ಕಳು ಕಳೆದುಕೊಂಡ ಆತ್ಮವಿಶ್ವಾಸವನ್ನು ಮರಳಿ ಗಳಿಸಲು, ದೊಡ್ಡದಾದ ಸಮಾಜದ ಭಾಗವಾಗಿ ತಮ್ಮನ್ನು ತಾವು ಕಂಡುಕೊಳ್ಳಲು ಅವರಿಗೆ ನೆರವಾಗಬೇಕು ಹಾಗೂ ನಾವು ಅವರ ಬಗ್ಗೆ ತಿಳಿದವರಾಗಿಯೂ, ಸಂವೇದನಾಶೀಲರಾಗಿಯೂ ಇರಬೇಕಾಗುತ್ತದೆ. ಮೇಹಕ್ ಬದುಕಿನಲ್ಲಿ ನೇರವಾದ ಅಥವಾ ಶಾಶ್ವತವಾದ ಯಾವುದೇ ಬದಲಾವಣೆಯನ್ನು ನಾವು ಮಾಡದೇ ಇರಬಹುದು. ಆದರೆ, ಒಬ್ಬ ವ್ಯಕ್ತಿಯಾಗಿ ಆಕೆ ತನ್ನ ಬಗ್ಗೆ ಕಾಳಜಿ ವಹಿಸುವಂತೆಯೂ, ಕಠಿಣ ಪರಿಸ್ಥಿತಿಯಿಂದ ಹೊರಬರುವಂತೆಯೂ ಖಂಡಿತಾ ನೆರವಾಗ–ಬಲ್ಲೆವು. 13 ವರ್ಷದ ರೋಶ್ನಿ, ಜಾರ್ಖಂಡ್ನಿಂದ ಭೋಪಾಲ್ಗೆ ಬಂದಿದ್ದಳು. ಆಕೆ ನಮ್ಮ ಶಾಲೆಗೆ ಸೇರಿ ಮೂರು ವರ್ಷಗಳಾಗಿದ್ದವು. ಪೇಂಟರ್ ಆಗಿರುವ ಅವಳ ತಂದೆ ಮರು ಮದುವೆಯಾಗಿದ್ದರು. ಶಾಲೆ ಪುನರಾರಂಭವಾದಾಗ ನೋಡಿದರೆ, ರೋಶ್ನಿ ತುಂಬಾ ಕೃಶವಾಗಿದ್ದಳು. ಅವಳೇನೂ ತುಂಬಾ ಆರೋಗ್ಯವಂತೆಯಾಗಿರಲಿಲ್ಲವಾದರೂ, ಈಗ, ಅವರ ಹಳ್ಳಿಗೆ ಪದೇಪದೇ ಹೋಗಿ ಬರುತ್ತಿದ್ದುದರಿಂದ, ಅಲ್ಲಿ ಆಹಾರದ ಅಭಾವ, ಮರಳಿ ಬಂದು ಮನೆಗೆ ಬೀಗ ಹಾಕಿಕೊಂಡು ಒಳಗೇ ಇರುವುದು, ಶಾಲೆಯಿಂದ ದೂರ ಉಳಿದಿರುವುದು... ಮುಂತಾದ ಕಾರಣಗಳಿಂದಾಗಿ ಅವಳ ಆರೋಗ್ಯ ಹದಗೆಟ್ಟಿತ್ತು. ಶಾಲೆಯಲ್ಲಿ ಬಿಸಿ ಮತ್ತು ತಾಜಾ ಊಟ ಸಿಗುತ್ತಿದ್ದುದು ಆಕೆಗೆ ಬಹಳ ದೊಡ್ಡ ಸಂಗತಿಯಾಗಿತ್ತು. ಶಾಲೆ ಶುರುವಾದ ಮೇಲೆ ಆಕೆಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿದ್ದನ್ನು ನಾವು ಗಮನಿಸಿದೆವು. ದಿನಕ್ಕೊಂದು ಬಾರಿಯಾದರೂ ಆಕೆ ಉತ್ತಮ ಆಹಾರ ಸೇವಿಸಬೇಕಾದ ಅಗತ್ಯದ ಅರಿವು ನಮಗೆ ಆಯಿತು. ಹಿಂದೆ, ನಮಗೆ ಅಡುಗೆ ಮನೆ ನಿರ್ವಹಣೆಯಲ್ಲಿ ಹಲವಾರು ಪ್ರಾಯೋಗಿಕ ಸಮಸ್ಯೆಗಳು ಎದುರಾಗಿದ್ದರಿಂದ, ಅಡುಗೆ ಮನೆಯನ್ನು ಮುಚ್ಚಿ, ನಮ್ಮ ನಮ್ಮ ಆಹಾರವನ್ನು ನಾವೇ ತರುವುದೆಂದು ನಿರ್ಧರಿಸಿದ್ದೆವು. ಆದರೆ ಆ ಬಳಿಕ ನಾವು, ಕೆಲವು ಮಕ್ಕಳಿಗಾದರೂ ಮಧ್ಯಾಹ್ನದ ಬಿಸಿಯೂಟ ಭಾರೀ ಪ್ರಯೋಜನಕಾರಿಯಾದುದು ಮತ್ತು ನಾವು ಯಾವ ಕಾರಣಕ್ಕೂ ಅದನ್ನು ನಿಲ್ಲಿಸಬಾರದು ಎಂಬುದನ್ನು ಅರಿತುಕೊಂಡೆವು. ಹಲವಾರು ದಾನಿಗಳು ನೆರವಾಗಿದ್ದರಿಂದ ಊಟದ ವ್ಯವಸ್ಥೆ ಮುಂದುವರೆಯಿತು. ಆಹಾರದ ತೀವ್ರ ಅವಶ್ಯಕತೆ ಎದುರಿಸುತ್ತಿದ್ದ ರೋಶ್ನಿ, ಈ ಸೌಲಭ್ಯದ ಪ್ರಮುಖ ಫಲಾನುಭವಿಯಾಗಿದ್ದಳು. ರೋಶ್ನಿ ಭೋಜ್ಪುರಿಯಲ್ಲಿ ಮಾತ್ರ ಮಾತನಾಡಬಲ್ಲವಳಾಗಿದ್ದಳು. ನಾವು ಅಷ್ಟಿಷ್ಟು ಭೋಜ್ಪುರಿ ಕಲಿತು ಆಕೆಯೊಂದಿಗೆ ಮಾತನಾಡುತ್ತಿದ್ದೆವು. ಅವಳ ಸಹೋದರಿ ಅಂಕಿತಾ ಕೂಡಾ ಶಾಲೆಗೆ ಬರಲಾರಂಭಿಸಿದಳು. ಇಬ್ಬರಿಗೂ ಹೆಚ್ಚು ಕಡಿಮೆ ಒಂದೇ ವಯಸ್ಸು. ಸಹೋದರಿಯರಿಗಿಂತ ಹೆಚ್ಚಾಗಿ ಅವರಿಬ್ಬರು ಗೆಳತಿಯರಂತೆ ಇದ್ದರು. ಆದರೆ ಮನೆಯ ವಾತಾವರಣ ಅವರಿಗೆ ಪೂರಕವಾಗಿರಲಿಲ್ಲ. ಅವರಿಗೆ ಒಬ್ಬ ಮಲಸಹೋದರನೂ ಇದ್ದ. ತಂದೆ ತಾಯಿ ಹೊರಗೆ ಕೆಲಸಕ್ಕೆ ಹೋದಾಗ ಹೆಚ್ಚಿನ ಅವಧಿ ಇವರಿಬ್ಬರೂ ಅವನೊಂದಿಗೆ ಕಾಲ ಕಳೆಯಬೇಕಾಗಿತ್ತು. ಅಲ್ಲದೆ, ಅವರಿಬ್ಬರೂ ನಿಯಮಿತವಾಗಿ ಶಾಲೆಗೆ ಬರುತ್ತಿದ್ದರೂ, ದೈನಂದಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಆಗುತ್ತಿರಲಿಲ್ಲ. ಅವರು ಎಲ್ಲವನ್ನೂ ಯಾಂತ್ರಿಕವಾಗಿ ಮಾಡುತ್ತಿದ್ದಂತೆ ಕಾಣುತ್ತಿತ್ತು. ನಮ್ಮ ದೈನಿಕ ಸಭೆಯಲ್ಲಿ ನಾವು ಈ ಸಮಸ್ಯೆಯನ್ನು ಚರ್ಚಿಸಿದೆವು. ಅವರು ಮನೆಗೆಲಸಗಳನ್ನು ಮಾಡಿದರೂ ಅವರಿಗೆ ಮನೆಯಲ್ಲಿ ಬೆಲೆಯೂ ಸಿಗುತ್ತಿರಲಿಲ್ಲ, ಯಾರೂ ಅದರ ಮಹತ್ವವನ್ನು ಅರ್ಥ ಮಾಡಿಕೊಳ್ಳುತ್ತಲೂ ಇರಲಿಲ್ಲ ಎಂಬುದನ್ನು ತಿಳಿದುಕೊಂಡೆವು. ಆ ಸಮಯದಲ್ಲಿ, ನಾವು 'ಉಮಾಂಗ್ ಕ್ರೀಡೋತ್ಸವ ವನ್ನು ಶಾಲೆಯಲ್ಲಿ ಆಯೋಜಿಸಿ, ಇಡೀ ಕ್ರೀಡೋತ್ಸವವನ್ನು ಸಂಘಟಿಸುವ ಜವಾಬ್ದಾರಿಯನ್ನು ಇನ್ನೂ ಇಬ್ಬರು ಮಕ್ಕಳ ಜೊತೆ ರೋಶ್ನಿ ಮತ್ತು ಅಂಕಿತಾಗೆ ವಹಿಸಿದೆವು. ಗಣಿತ ಶಿಕ್ಷಕರಾದ ಅಂಕಿತ್, ಅವರ ತಂಡದಲ್ಲಿದ್ದರು. ಆಗ ಒಂದು ಪವಾಡವೇ ನಡೆಯಿತು!. ಅಂಕಿತಾ ಮತ್ತು ರೋಶ್ನಿ ಪ್ರತಿದಿನದ ಚಟುವಟಿಕೆಗಳ ಬಗ್ಗೆ ನಮ್ಮೊಂದಿಗೆ ಸೇರಿ ಯೋಜಿಸಿದರು. ಮಕ್ಕಳ ತಂಡವನ್ನು ಆರಿಸುತ್ತಾ, ಬೇಕಾಗುವ ಸಾಮಗ್ರಿಗಳ ಪಟ್ಟಿ ತಯಾರಿಸುತ್ತಾ, ಈ ಎಲ್ಲದರ ಲೆಕ್ಕಪತ್ರಗಳನ್ನು ನಿರ್ವಹಿಸಿದರು. ಮೂರು ದಿನಗಳ ಕಾರ್ಯಕ್ರಮದಲ್ಲಿ ಪ್ರತಿದಿನದ ವರದಿಯನ್ನು ಇಬ್ಬರೂ ಸೇರಿ ಬರೆದರು. ಬೆಳಗಿನ ಸಂಗೀತ ಸಭಾದಲ್ಲಿ ರೋಶ್ನಿ

ಮತ್ತು ಅಂಕಿತಾರನ್ನು ಅಭಿನಂದಿಸಿದೆವು. ಅಂಕಿತಾ ಮತ್ತು ರೋಶ್ನಿಯ ಹೆತ್ತವರು ಹೊರಗೆ ಕೆಲಸಕ್ಕೆ ಹೋಗುವಾಗ, ಸಹೋದರರ ಜವಾಬ್ದಾರಿಯ ಜತೆಗೆ ಮನೆಗೆಲಸಗಳನ್ನು ನಿಭಾಯಿಸಿ, ಪ್ರತಿನಿತ್ಯ ಅವರು ಶಾಲೆಗೆ ಬಂದಿದ್ದಾರೆ ಹಾಗೂ ಕಾರ್ಯಕ್ರಮದ ಜವಾಬ್ದಾರಿಯನ್ನೂ ನಿರ್ವಹಿಸಿದ್ದಾರೆ ಎಂದು ಸಂಗೀತ ಸಭಾದಲ್ಲಿ ಎಲ್ಲಾ ಮಕ್ಕಳಿಗೆ ವಿವರಿಸಿದೆವು. ಎಲ್ಲರೂ ಅವರನ್ನು ಮೆಚ್ಚಿ ಚಪ್ಪಾಳೆ ತಟ್ಟಿದರು. ಶಾಲೆಯ ಪರವಾಗಿ ನಮಿತಾ ಅವರಿಬ್ಬರಿಗೂ ಒಂದೊಂದು ಕತೆ ಪುಸ್ತಕವನ್ನು ನೀಡಿದರು. ಮುಂದಿನ ದಿನಗಳಲ್ಲಿ ಅಂಕಿತಾ ಹಿಂದಿಯಲ್ಲಿ ಹಿಡಿತ ಸಾಧಿಸಿದರೆ, ರೋಶ್ನಿ ಗಣಿತದಲ್ಲಿ ಚೆನ್ನಾಗಿದ್ದಳು. ಮುಂದಿನ ವರ್ಷ ಅವರು ಒಂಬತ್ತನೇ ತರಗತಿಗೆ ಹೋಗುತ್ತಾರೆ. ಅವರು ನಮ್ಮ ಶಾಲೆ ಬಿಡುತ್ತಾರೆ ಎಂಬುದೇ ನಮಗೆ ಬೇಸರದ ಸಂಗತಿ.

ಗೋಪಾಲ್, 12ರ ಹರೆಯದವನು. ಸಮೀಪದ ಗುಡಿಸಲಿನಲ್ಲಿ ತನ್ನ ಅಜ್ಜ ತಾತನ ಜೊತೆ ಅವನು ವಾಸಿಸುತ್ತಾನೆ. ಅವನು ತನ್ನ ತಾತನೊಂದಿಗೆ ನಾಲ್ಕು ಎಮ್ಮೆಗಳನ್ನು ಸಾಕಿಕೊಂಡು ಸಣ್ಣದೊಂದು ಹಾಲಿನ ಡೈರಿಯನ್ನು ನಡೆಸುತ್ತಿದ್ದಾನೆ. ಪ್ರತಿದಿನ ಬೆಳಗ್ಗೆ ಬೇಗನೆ ಎದ್ದು ಎಮ್ಮೆಗಳಿಗೆ ಆಹಾರ ಕೊಟ್ಟು, ಸೈಕಲ್ನಲ್ಲಿ ಹೋಗಿ ಹಾಲು ಸರಬರಾಜು ಮಾಡಿ, ಶಾಲೆಗೆ ಹಾಜರಾಗುತ್ತಾನೆ. ಅವನ ಹೆತ್ತವರು ಹಳ್ಳಿಯಲ್ಲಿದ್ದು, ಬಹುಶಃ ಅವರ ನಡುವೆ ಏನೋ ಕೌಟುಂಬಿಕ ಕಲಹ ಆಗಿರಬೇಕು. ಹಾಗಾಗಿ ಅವರು ಗೋಪಾಲನನ್ನಾಗಲೀ, ಗೋಪಾಲ್ ಅವರನ್ನಾಗಲೀ ಪರಸ್ಪರ ಭೇಟಿಯಾಗುವುದಿಲ್ಲ. ಆದ್ದರಿಂದ ಅವನ ಅಜ್ಜ ಅಜ್ಜಿಯೇ ಅವನಿಗೆ ಸರ್ವಸ್ವವಾಗಿದ್ದರು. ಆದರೆ, ಅವನ ತಾತ ಕೋವಿಡ್ ಸಮಯದಲ್ಲಿ ಸಾವಿಗೀಡಾದರು. ಅದು ಗೋಪಾಲ್ಗೆ ತೀರಾ ದುಸ್ತರವಾದ ಸಮಯವಾಗಿತ್ತು. ಶಾಲೆಯೂ ಮುಚ್ಚಿತ್ತು. ಆದರೆ ಕ್ರೀಡಾ ಶಿಕ್ಷಕ ವಿಜಯ್ ಮತ್ತು ನಾನು ಗೋಪಾಲ್ನನ್ನು ನಿಯಮಿತವಾಗಿ ಭೇಟಿಯಾಗುತ್ತಿದ್ದೆವು. ಶಾಲೆ ಪುನರಾರಂಭವಾದಾಗ, ಅವನು ಮನೆಗೆಲಸ ಮತ್ತು ಡೈರಿ ಕೆಲಸಗಳನ್ನು ಮುಗಿಸಿ ಶಾಲೆಗೆ ಬರಲಾರಂಭಿಸಿದ. ಅವನಿಗೆ ‘ಶಾಲಾ ಕುಟುಂಬ’ದ ಅಗತ್ಯತೆ ತುಂಬಾ ಇತ್ತು. ನಮಗೂ ಹಾಗೇ ಅನಿಸಿತು. ಒಂದು ದಿನ ನಾವು ಶಾಲೆಯ ಎಲ್ಲಾ ಮಕ್ಕಳನ್ನು ಕರೆದುಕೊಂಡು ಅವನ ಡೈರಿಗೆ ಭೇಟಿ ನೀಡಿದೆವು. ಶಾಲೆಯಿಂದ ಕೊಂಡೊಯ್ದಿದ್ದ ಆಹಾರವನ್ನು ನಾವೆಲ್ಲರೂ ಅಲ್ಲಿಯೇ ಸೇವಿಸಿದೆವು. ಅವನ ಅಜ್ಜಿ ಭಾವುಕರಾಗಿ ಅಳಲಾರಂಭಿಸಿದರು. ಆಕೆಯ ಗಂಟಲಿನಲ್ಲಿ ದೊಡ್ಡ ಗಾತ್ರದ ಗೆಡ್ಡೆ ಆಗಿತ್ತು. ಆಕೆ ಬುಂದೇಲಿಯಲ್ಲಿ, ‘ಗೋಪಾಲ ಅನಾಥ ಅಲ್ಲ. ಶಾಲೆಯೇ ಅವನ ಕುಟುಂಬ’ ಎಂದು ಹೇಳಿದರು. ಎಲ್ಲಾ ಮಕ್ಕಳಿಗೂ ಆಕೆ ಬೆಲ್ಲ ನೀಡಿದರು.

ಗೋಪಾಲನ ಕುಟುಂಬವನ್ನು ಅವನಿಗೆ ಕೊಡಿಸಲು ಯಾರಾದರೂ ಏನು ಮಾಡಲು ಸಾಧ್ಯ? ಶಾಲೆಯೇ ಅವನ ಜತೆಗಿದ್ದು, ಕಾಳಜಿ ವಹಿಸಿದರೆ ಅವನಿಗೆ ಸಾಕು. ಗೋಪಾಲ ಶಾಲೆಗೂ ಹಾಲು ಸರಬರಾಜು ಮಾಡುತ್ತಿದ್ದ. ಅದುವೇ ಅವನ ಜೀವನೋಪಾಯದ ದಾರಿಯಾಗಿದ್ದುದರಿಂದ ಅದರ ಲೆಕ್ಕವನ್ನು ಬರೆದಿಡುತ್ತಿದ್ದ. ಆದರೆ, ಅವನು ಕೆಲವೊಮ್ಮೆ ಮಜ್ಜಿಗೆಯನ್ನು ಉಚಿತವಾಗಿ ನೀಡುತ್ತಿದ್ದ. ಶಾಲೆಯ ಪಾಕಶಾಲೆಯಲ್ಲಿ ಪದಾರ್ಥವನ್ನು ತಯಾರಿಸಲಾಗುತ್ತಿತ್ತು. ಎಲ್ಲರೂ ಸಂತೋಷದಿಂದ ಊಟ ಮಾಡುತ್ತಿದ್ದರು. ‘ಆನಂದ್ ನಿಕೇತನ್’ನಲ್ಲಿ ನಮ್ಮ ಬೆಳಗಿನ ಅಧಿವೇಶನವು ಹಾಡು ಮತ್ತು ಸಂಗೀತದಿಂದ ಕೂಡಿದ್ದು, ಎಲ್ಲಾ ಮಕ್ಕಳು ಖುಷಿಯಾಗಿ, ಮುಕ್ತವಾಗಿ ಮತ್ತು ಕಡ್ಡಾಯವಾಗಿ ಪಾಲ್ಗೊಳ್ಳುತ್ತಿದ್ದರು. ಪ್ರತಿದಿನವೂ ನಡೆಯುತ್ತಿದ್ದ ವೇದಿಕೆ ಅಧಿವೇಶನವು ಮಕ್ಕಳಿಗೆ ತಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ಮುಕ್ತ ಅವಕಾಶ ಕೊಡುತ್ತಿದ್ದುದರಿಂದ ಭಾರೀ ಯಶಸ್ಸು ಕಂಡಿತ್ತು. ಈ ಚಟುವಟಿಕೆಯಿಂದಾಗಿ ಮಕ್ಕಳ ಯೋಚನಾಶಕ್ತಿಯನ್ನು ಮತ್ತು ಅವರ ಖಾಸಗಿ ಬದುಕಿನ ಅನೇಕ ಸಂಗತಿಗಳನ್ನು ತಿಳಿದುಕೊಳ್ಳುವ ಅವಕಾಶ ಶಿಕ್ಷಕರಿಗೆ ಸಿಕ್ಕಿದಂತಾಗುತ್ತಿತ್ತು. ಶಿಕ್ಷಕರೂ ತಮ್ಮ ಯೋಚನೆಗಳನ್ನು ಹಂಚಿಕೊಳ್ಳುವ ಮೂಲಕ ಇಡೀ ಪ್ರಕ್ರಿಯೆಯಲ್ಲಿ ಸಮಾನತೆಯ ವಾತಾವರಣವನ್ನು ನಿರ್ಮಿಸುತ್ತಿದ್ದರು. ಇದರಿಂದಾಗಿ, ತಮ್ಮ ಶಿಕ್ಷಕರೂ ತಮ್ಮಂತೆಯೇ ಸಾಧಾರಣ ಬದುಕನ್ನು ಬದುಕುತ್ತಿದ್ದಾರೆ ಎಂಬ ಭಾವನೆ ಬಂದು ಮಕ್ಕಳಿಗೆ ನಿರಾಳವಾಗುತ್ತಿತ್ತು. ಅವರಿಗೂ ನಮ್ಮಂತೆ ಹೆದರಿಕೆಗಳು, ಉದ್ವಿಗ್ನತೆಗಳು, ಅಭಾವಗಳು ಇವೆ; ನಾವು ಪರಸ್ಪರರಿಗೆ ಭಾವನಾತ್ಮಕ ಬೆಂಬಲವನ್ನು ನೀಡಬಹುದು ಎಂದು ಮಕ್ಕಳಿಗೆ ಅನಿಸಲಾರಂಭಿಸಿತು. ಶಾಲೆಯಲ್ಲಿನ ಈ ವಾತಾವರಣ ಮತ್ತು ಪ್ರಕ್ರಿಯೆಗಳು ಮೇಹಕ್, ರೋಶ್ನಿ, ಅಂಕಿತಾ ಮತ್ತು ಗೋಪಾಲ್ನಂತಹ ಮಕ್ಕಳಿಗೆ ಮಹತ್ತರವಾಗಿ ಸಹಕಾರಿಯಾಯಿತು ಎಂದು ಅವರ ಪ್ರಕರಣಗಳಲ್ಲಿ ಸ್ಪಷ್ಟವಾಗಿದೆ.

*ಮಕ್ಕಳ ಸುರಕ್ಷತೆಯ ಹಿನ್ನೆಲೆಯಲ್ಲಿ ಅವರ ಹೆಸರುಗಳನ್ನು ಬದಲಿಸಲಾಗಿದೆ.



**ಅನಿಲ್ ಸಿಂಗ್**, ಕಳೆದ 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ, ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿದ್ದಾರೆ. ಹಿಂದಿ ಭಾಷೆ ಮತ್ತು ಸಮಾಜ ವಿಜ್ಞಾನವನ್ನು ಬೋಧಿಸುವ ಜೊತೆಗೆ, ಅವರು ವಿದ್ಯಾರ್ಥಿಗಳಿಗೆ ರಂಗ ಶಿಕ್ಷಣವನ್ನೂ ಪ್ರತಿದಿನ ಹೇಳಿಕೊಡುತ್ತಾರೆ. ಕತೆ ಹೇಳುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ತರಗತಿಕೊಠಡಿಯ ಅವರ ಅನುಭವಗಳು ಮತ್ತು ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಿಸಿದ ಅವರ ಇತರ ಲೇಖನಗಳು ನಿಯಮಿತವಾಗಿ ಪ್ರಕಟವಾಗುತ್ತಿರುತ್ತವೆ. ಭೋಪಾಲದ ಆನಂದ್ ನಿಕೇತನ್ ಡೆಮಾಕ್ರಟಿಕ್ ಸ್ಕೂಲ್‌ನಲ್ಲಿ ರೂಢಿಯಲ್ಲಿರುವ ಶಿಕ್ಷಣದ ಪರ್ಯಾಯ ಮಾದರಿಗೂ ಅವರಿಗೂ ನಂಟು ಇದೆ. ಪ್ರಸ್ತುತ, ಅವರು ಪರಾಗ್‌ನಲ್ಲಿ ವೃತ್ತಿಪರ ಅಭಿವೃದ್ಧಿ ಉಪಕ್ರಮಗಳಲ್ಲಿ ಬೋಧಕ ಸಿಬ್ಬಂದಿಯಾಗಿದ್ದಾರೆ. ಅವರನ್ನು bihuanandanil@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**